ಸಿ.ಸಿ. ನಂ ಃ**106/2025**
ಪಿ.ಡಬ್ಲ್ಯೂ -1

ದಿನಾಂಕಃ **16/02/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ಸಾಕ್ಷಿಯು ತಾವು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 16/08/2025 ರಂದು ಮಾಡಿದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು ನಿಪಿ 2 ಅನ್ನು ಮಾಡುವ ಕಾಲಕ್ಕೆ ತೆಗೆದ 9 ಭಾವಚಿತ್ರಗಳನ್ನು ಹಾಗೂ ಒಂದು ಸಿ ಡಿ ಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ರಿಂದ 12 ಎಂದು ಗುರುತಿಸಲಾಯ್ತು. ದಿಃ 18/08/2025 ರಂದು ಮಾಡಿದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಯ್ತು. ನಿಪಿ 13 ನ್ನು ಮಾಡುವ ಕಾಲಕ್ಕೆ ತೆಗೆದ 7 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 14 ರಿಂದ 20 ಎಂದು ಗುರುತಿಸಲಾಯ್ತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮರದ ಹಿಡಿ ಇರುವ ಕಬ್ಬಿಣದ ಸುತ್ತಿಗೆ, ಗ್ಯಾಸ್ ಸಿಲಿಂಡರ್, ಸೋಲಾರ್ ಪ್ಯಾನಲ್, ಒಂದು ಬ್ಯಾಟರಿ, ಒಂದು ಗ್ಯಾಸ್ ಸ್ಟೌವ್, ಒಂದು ಕರೆಂಟ್ ಇಸ್ತ್ರಿ ಪೆಟ್ಟಿಗೆ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು 1 ರಿಂದ 6 ಎಂದು ಗುರುತಿಸಲಾಯ್ತು. (ಸದರಿ ಮುದ್ದೆ ಮಾಲು 1 ರಿಂದ 6 ಅನ್ನು ಸಾಕ್ಷಿಯು ಭಾವಚಿತ್ರಗಳಲ್ಲಿ ನೋಡಿ ಗುರುತಿಸಿರುತ್ತಾರೆ, ಮುದ್ದೆ ಮಾಲು 1 ರಿಂದ 6 ಅನ್ನು ಪಿರ್ಯಾದುದಾರರಿಗೆ ಮರಳಿ ನೀಡಲಾಯ್ತು.) ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು: ಮಾನ್ಯ ಎ ಪಿ ಪಿ ಯವರಿಂದ:</u>

ದಿ: 16/08/2025 ರಂದು ನಾನು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ 2 ಮತ್ತು 3 ರವರ ಸಮಕ್ಷಮ ಪೊಲೀಸರಿಗೆ ನಾನು ಆರೋಪಿತರು ಕೃತ್ಯಕ್ಕೆ ಬಳಸಿದ ಒಂದು ಕಬ್ಬಿಣದ ರಾಡು ಹಾಗೂ ಒಂದು ತುಂಡಾಗಿರುವ ಬೀಗದ ಕೈ ಯನ್ನು ಹಾಜರುಪಡಿಸಿದ್ದು ಅದನ್ನು ನಮ್ಮ ಸಮಕ್ಷಮ ನಿಪಿ 2 ರಂತೆ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಸ್ತುಗಳನ್ನು ನಮ್ಮ ಸಮಕ್ಷಮ ಪೊಲೀಸರು ಅಮಾನತ್ತುಪಡಿಸಿಕೊಂಡರು ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸ್ಟೀಲ್ ಬೀಗ ಮತ್ತು ಅದರ ಕೊಂಡಿ ಹಾಗೂ ಒಂದು ಗೋದ್ರೇಜ್ ಬೀರುವಿನ ಲಾಕ್ ನ ರಾಡನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆ ಮಾಲು 7 ಮತ್ತು 8 ಎಂದು ಗುರುತಿಸಲಾಯ್ತು.

<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದ:</u>

ನಾನು ಶೃಂಗೇರಿ ತಾಲ್ಲೂಕಿನಲ್ಲಿ ಮನೆ ಮಾಡಿಕೊಂಡು ವಾಸವಿರುತ್ತೇನೆ ಎಂದರೆ ಸರಿ. ನಮ್ಮ ಮನೆಗೆ ಶೃಂಗೇರಿಯಲ್ಲಿ ಗ್ಯಾಸ್ ಸಿಲಿಂಡರನ್ನು ಸರಬರಾಜು ಮಾಡುತ್ತಾರೆ ಎಂದರೆ ಸರಿ. ನನಗೆ ಒಂದು ಸಿಲಿಂಡರ್ ಪಡೆಯುವ ಬುಕ್ಕನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು 2017 ರಲ್ಲಿ ಹೆಚ್ಚುವರಿಯಾಗಿ ಒಂದು ಸಿಲಿಂಡರ್ ಪಡೆದಿರುತ್ತೇನೆ. ಎರಡು ಸಿಲಿಂಡರ್ ಇದ್ದರೇ ಒಂದು ಸಿಲಿಂಡರನ್ನು ಇಟ್ಟು ಇನ್ನೊಂದು ಸಿಲಿಂಡರನ್ನು ತುಂಬಿಸಿಕೊಳ್ಳಬಹುದು ಎಂದರೆ ಸರಿ. ನಮಗೆ ಶೃಂಗೇರಿಯ ದುರ್ಗಾಂಭ ಗ್ಯಾಸ್ ಏಜೆನ್ಸಿ ರವರು ಸಿಲಿಂಡರ್ ಸರಬರಾಜು ಮಾಡುತ್ತಾರೆ ಎಂದರೆ ಸರಿ. ಬಾಳೆಹೊನ್ನೂರು ಕಡೆ ಅನ್ನಪೂರ್ಣ ಗ್ಯಾಸ್ ಏಜೆನ್ಸಿ ರವರು ಸಿಲಿಂಡರ್ ಸರಬರಾಜು ಮಾಡುತ್ತಾರೆ ಎಂದರೆ ಸರಿ. ನಾನು ನ್ಯಾಯಾಲಯದಿಂದ ಬಿಡಿಸಿಕೊಂಡ ಸಿಲಿಂಡರ್ ಅನ್ನು ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ.

2. ಚಾಸಾ 2 ಮತ್ತು 3 ರವರು ನನ್ನ ದೊಡ್ಡಪ್ಪನ ಮಕ್ಕಳು ಎಂದರೆ ಸರಿ. ಚಾಸಾ 10 ರವರು ನನ್ನ ದೊಡ್ಡಪ್ಪನ ಮಗನ ಮಗ ಇರುತ್ತಾರೆ. ನಾನು ದೂರಿನಲ್ಲಿ ಹೇಳಿದ 21 ಕೆ ಜಿ ತೂಕದ ತಾಮ್ರದ 2 ಹಂಡೆ ಮತ್ತು 2 ಕೊಡಪಾನಗಳು, ಅರ್ಧ ಹೆಚ್ ಪಿ ಕರೆಂಟ್ ಮೋಟರ್ ಇವುಗಳು ತುಂಬಾ ಭಾರವಾದ ಮತ್ತು ದೊಡ್ಡದಾದ ವಸ್ತುಗಳು ಎಂದರೆ ಸರಿ. ಸದರಿ ವಸ್ತುಗಳು ಮನೆಯಲ್ಲಿ ಎಲ್ಲೇ ಇದ್ದರೂ ಸಹ ಕಾಣುತ್ತವೆ ಎಂದರೆ ಸರಿ. ನಾನು ದೂರು ಕೊಡುವ ಕಾಲಕ್ಕೆ ನಮ್ಮ ಮನೆಯ

ಕೀ ಯನ್ನು ಪೊಲೀಸರು ಕೇಳಿರುವುದಿಲ್ಲ ಮತ್ತು ನಾನು ಕೊಟ್ಟಿರುವುದಿಲ್ಲ ಎಂದರೆ ಸರಿ. ಗೋದ್ರೇಜ್ ಬೀರುವಿನ ಲಾಕ್ ಕಟ್ಟಾದರೇ ಗೋದ್ರೇಜನ್ನು ತೆರೆಯಲು ಆಗುವುದಿಲ್ಲ ಎಂದರೆ ಸರಿ.ನಾನು ಆ ದಿನ ನಮ್ಮ ಮನೆಗೆ ಹೋದಾಗ ಸದರಿ ಗೋದ್ರೇಜ್ ಬೀರು ಓಪನ್ ಇತ್ತು. ಮಹಜರಿನಲ್ಲಿಯಾಗಲೀ ಅಥವಾ ದೂರಿನಲ್ಲಿಯಾಗಲೀ ನಾನು ಗೋದ್ರೇಜ್ ಬೀರು ಓಪನ್ ಇತ್ತು ಎಂಬ ಬಗ್ಗೆ ಹೇಳಿಲ್ಲ ಎಂದರೆ ಸರಿ.

3. ನಾನು ದೂರು ಕೊಡುವ ಪೂರ್ವದಲ್ಲಿ ಮನೆಯಲ್ಲಿ ಕೂಲಂಕುಷವಾಗಿ ಪರಿಶೀಲನೆ ಮಾಡಿ ನಂತರ ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ದೂರನ್ನು ಎನ್ ಆರ್ ಪುರದ ತಾಲ್ಲೂಕು ಕಚೇರಿಯ ಬಳಿ ಟೈಪ್ ಮಾಡಿಸಿರುತ್ತೇನೆ. ಪೊಲೀಸರು ಮಹಜರಿಗೆ ಬರುವ ಬಗ್ಗೆ ನಮಗೆ ಯಾವುದೇ ನೋಟೀಸು ನೀಡಿರುವುದಿಲ್ಲ. ನಾನು ದೂರು ನೀಡಿದ ದಿನವೇ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿತರಿಗೂ ಮತ್ತು ಮುದ್ದೆ ಮಾಲುಗಳಿಗೂ ಯಾವುದೇ ಸಂಬಂದ ಇರದೇ ಇದ್ದರೂ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಬಾಳೆಹೊನ್ನೂರು ಗ್ಯಾಸ್ ಏಜೆನ್ಸಿ ರವರಿಗೆ ಸಂಬಂದಪಟ್ಟ ಸಿಲಿಂಡರನ್ನು ಬಳಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಶೃಂಗೇರಿಯ ದುರ್ಗಾಂಭ ಗ್ಯಾಸ್ ಏಜೆನ್ಸಿ ರವರಿಗೆ ಸಂಬಂದಪಟ್ಟ ಸಿಲಿಂಡರನ್ನು ಬಳಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಸುಳ್ಳು ದೂರನ್ನು ನೀಡಿ ಸುಳ್ಳು ಮಹಜರನ್ನು ನಮ್ಮ ಸಂಬಂಧಿಕರ ಜೊತೆ ಸೇರಿಕೊಂಡು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ದೂರು ಕೊಡುವ ಕಾಲಕ್ಕೆ ನಾನು ಸುತ್ತಿಗೆ ಕಳ್ಳತನ ಆಗಿರುತ್ತದೆ ಎಂದು ಹೇಳಿಲ್ಲ ಎಂದರೆ ಸರಿ. ನಾನು ನ್ಯಾಯಾಲಯದಿಂದ ಸುತ್ತಿಗೆ ನಮ್ಮದು ಇರುತ್ತದೆ ಎಂದು ಬಿಡಿಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಸುತ್ತಿಗೆ ನನಗೆ ಸಂಬಂಧಿಸಿದ್ದು ಎಂಬುದರ ಬಗ್ಗೆ ಮಹಜರಿನಲ್ಲಿಯಾಗಲೀ ಅಥವಾ ನನ್ನ ಮರುಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

4. ಆರೋಪಿತರು ನಮ್ಮ ಊರು ಮನೆಯವರು ಎಂದರೆ ಸರಿ. ಅವರು ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿ. ಮಹಜರಿನಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಮಹಜರಿಗೆ ಯಾರ್ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿ. ನಾನು ನ್ಯಾಯಾಲಯದಿಂದ ಬಿಡಿಸಿಕೊಂಡ ವಸ್ತುಗಳು ನನಗೆ ಸಂಬಂಧಿಸಿದ್ದು ಇರುತ್ತವೆ ಎಂಬುದರ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ

ಸರಿ. ಆರೋಪಿತರು ಕಳ್ಳತನ ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದನ್ನು ಬಿಟ್ಟರೇ ನನಗೆ ವೈಯುಕ್ತಿಕವಾಗಿ ಗೊತ್ತಿರುವುದಿಲ್ಲ ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಬಂದಾಗ ಬೆರಳಿನ ಮಾದರಿಯನ್ನು ತೆಗೆದುಕೊಳ್ಳಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿ. ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಕೇಸಿನ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ